**ಎಮ್.ವಿ.ಸಿ. ನಂಃ 577/2023**
**ಪಿ .ಡಬ್ಲ್ಯೂಃ1,**

ದಿನಾಂಕ : **19-08-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು :- ಶ್ರೀ ಬಿ ಎಸ್ ಕೆ ವಕೀಲರಿಂದ

ನಾನು ಶಾಲೆ ಕಲಿತಿರುವುದಿಲ್ಲಾ. ನನಗೆ 52 ವರ್ಷ ಆಗಿದೆ ಎಂದು ಆಧಾರ ಕಾರ್ಡ ಸಲ್ಲಿಸಿದ್ದೇನೆ. ಸದರಿ ನಿಪಿ-12 ರಲ್ಲಿ ನನ್ನ ಜನ್ಮ ದಿನಾಂಕ: 1970 ಎಂದು ಬರೆಯಲಾಗಿದೆ ಎಂದರೆ ಸರಿ. ನಾನು ಅಪಘಾತವಾದ ದಿನದಂದು ಶಿವರಾಮನಾಯಕ ತಾಂಡಾ ದಿಂದ ಚಿಮ್ಮನಚೋಡ ಗ್ರಾಮಕ್ಕೆ ಸಂತೆ ಮಾಡಲು ಮೋಟಾರ ಸೈಕಲ ಮೇಲೆ ಹೋಗಿದ್ದೆ. ನನ್ನ ಹತ್ತಿರ ಚಾಲನಾ ಪತ್ರ ಇದ್ದು ಅಪಘಾತ ಸಮಯದಲ್ಲಿ ಕಳೆದು ಹೋಗಿದೆ.. ನನ್ನ ಹತ್ತಿರ ಚಾಲನಾ ಪತ್ರ ಇಲ್ಲಾ ಆದಕಾರಣ ಕಳದಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಅಪಘಾತ ಆಗುವುದಕ್ಕಿಂತ ಮುಂಚೆ ಜೆ.ಸಿ.ಪಿ. ಆರಪೇಟರ್ ಎಂದು ಕೆಲಸ ಮಾಡುತ್ತಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ತಿಂಗಳಿಗೆ ರೂ. 35,000/- ಆಧಾಯ ಇತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿಸುವುದಿಲ್ಲಾ. ನಾನು ಸಂಬಳ ಪಡೆಯುತ್ತಿದ್ದ ಮಾಲಿಕರಿಂದ ಸಂಬಳ ಪಡೆದ ಬಗ್ಗೆ ಯಾವುದೇ ದಾಖಲೆ ಸಲ್ಲಿಸಿಲ್ಲಾ. ನಾನು ಮೋಟಾರ ಸೈಕಲ ಮೇಲೆ ಹೋಗುವಾಗ ಹಿಂದಿನಿಂದ ಬಂದು ಕಾರ ಅಪಘಾತ ಪಡಿಸಿತ್ತು. ಅಪಘಾತ ಪಡಿಸಿದ ಕಾರ ನಂಬರ ಕೆಎ-32-8466 ಇರುತ್ತದೆ.

ಅಪಘಾತವಾದ ನಂತರ ಅಪಘಾತ ಪಡಿಸಿದ ವ್ಯಕ್ತಿ ತನ್ನ ಕಾರಿನಲ್ಲಿ ಅಸ್ಪತ್ರೆಗೆ ಕರದುಕೊಂಡ ಹೋದ. ನನಗೆ ಅಪಘಾತವಾದ ಬಗ್ಗೆ ವೈಧ್ಯರಿಗೆ ತಿಳಿಸಿಲ್ಲಾ ಕಾರಣ ನನಗೆ ಮೂರ್ಚೆ ಹೋಗಿತ್ತು. ಅಪಘಾತವಾದ ಬಗ್ಗೆ ನನ್ನ ಹೆಂಡತಿ ನೀಲಾಬಾಯಿ ದೂರು ನೀಡಿದ್ದಾರೆ. ಅಪಘಾತವಾದ 2 ದಿನ ನಂತರ ದೂರು ಸಲ್ಲಿಸಲಾಗಿದೆ ಎಂದರೆ ಸರಿ. ನನ್ನ ಗಾಯದ ಪ್ರಮಾಣ ಪತ್ರದಲ್ಲಿ ವೈದ್ತರು ನನ್ನನ್ನು ಆಸ್ಪತ್ರೆಗೆ ಅಂಬುಲೆನ್ಸ ಮುಖಾಮತರ ಕರೆದಕೊಂಡು ಬಂದಿದ್ದಾರೆ ಎಂಬುದರ ಬಗ್ಗೆ ನಮೂದಿಸ ಬಗ್ಗೆ ನನಗೆ ಗೊತ್ತಿಲ್ಲಾ. ನನ್ನ ಹೆಂಡತಿ, 1 ನೇ ಎದುರದಾರ ಸೇರಿ 2 ದಿನಗಳ ನಂತರ ಮಿಲಾಪೆ ಆಗಿ 1 ನೇ ಎದುರದಾರನ ಕಾರಿನಿಂದ ಅಪಘಾತ ಆಗಿದೆ

**ಎಮ್.ವಿ.ಸಿ. ನಂಃ 577/2023**

**ಪಿ .ಡಬ್ಲ್ಯೂಃ1,**

ಎಂದು ಪರಿಹಾರ ಪಡೆಯಲು ಸೃಷ್ಟಿಸಿ ದೂರು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ನಾನೇ ಬಿದ್ದು ಗಾಯ ಪಡಿಸಿಕೊಂಡಿದ್ದು ಈ ಪರಿಹಾರ ಪಡೆಯಲು ಸುಳ್ಳು ದೂರು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

ಅಪಘಾತದಲ್ಲಿ ನನಗೆ ತಲೆಗೆ ಗಾಯ ಆಗಿರುತ್ತದೆ. ಆಸ್ಪತ್ರೆಯಲ್ಲಿ ನಾನು ಒಂದು ತಿಂಗಳು ಒಳರೋಗಿಯಾಗಿದ್ದೆ. ಅಪಘಾತದಿಂದ ನಾನು ವಾಸಿ ಆಗಿ ಈಗ ಆರೋಗ್ಯದಿಂದ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಗಿಟ್ಟಿಸಲು ವೈದ್ಯರೊಂದಿಗೆ ಮಿಲಾಪೆ ಆಗಿ ಸುಳ್ಳು ಅಂಗ ನ್ಯೂನ್ಯತೆ ಪ್ರಮಾಣ ಪತ್ರ ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ಎಲ್ಲಾ ಮೆಡಿಕಲ್ ಬಿಲ್ಲಗಳನ್ನು ಸೃಷ್ಟಿಸಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ರೂ. 4,50,000/- ಖರ್ಚು ಆಗಿರುತ್ತದೆ ಮತ್ತು ಮುಂದುವರೆದ ಚಿಕಿತ್ಸೆ ರೂ. 2,50,000/- ಹಣ ಬೇಕೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನೇ ಬಿದ್ದು ಗಾಯ ಪಡಿಸಿಕೊಂಡಿದ್ದು , ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.